

ಮಾಟಿ ಕಹೇ ಕುಂಹಾರ್ ಸೆ,
ತೂ ಕ್ಯಾ ರೋಂದೇ ಮೋಹೆ!
ಏಕ್ ದಿನ್ ಐಸಾ ಆಯೇಗಾ
ಮೈಂ ರೋಂದೂಂಗೀ ತೊಹೆ...

ಹದಿನೈದನೆಯ ಶತಮಾನದ ಸೂಫಿ ಸಂತ ಕಬೀರ್‌ದಾಸ್ ಅವರ ಒಂದು ಸುಂದರವಾದ ದೋಹಾದ ಆರಂಭದ ಸಾಲುಗಳಿವು. "ನೀನು ಏನು ನನ್ನನ್ನು ತುಳಿಯುವುದು, ಒಂದು ದಿನ ನಾನೇ ನಿನ್ನನ್ನು ತುಳಿದರೆ? ಹಾಗಂತ ಮಣ್ಣು ಕುಂಬಾರನಿಗೆ ತಿರುಗಿ ಹೇಳಿತಂತೆ!"

ಸದಾ ನಾವು ತುಳಿದುಕೊಂಡೇ ಇರುವ ನಮ್ಮ ಕಾಲ ಕೆಳಗಿನ ಮಣ್ಣು ನಿಸರ್ಗದ ಅದ್ಭುತ! ಕುಂಬಾರನು ಮಣ್ಣನ್ನು ಹದ ಮಾಡಲು ತುಳಿಯುವುದನ್ನು ಕಬೀರರು ಕಂಡಿದ್ದು, ಮಾನವರು ಕಾಲ ಕೆಳಗಿನ ಮಣ್ಣನ್ನು ಹಾಳುಗೆಡಹುತ್ತಿರುವ ಇಂದಿನ ಸನ್ನಿವೇಶದಲ್ಲಿ ಬಹು ದೊಡ್ಡ ರೂಪಕದಂತೆ ಕಾಣುತ್ತಿದೆ. ಹಾಗೆಯೇ ಬೇಕಾಬಿಟ್ಟಿಯಾದ ಬಳಕೆಯಿಂದಾಗಿ ಮಣ್ಣು ಸವಕಳಿಗೊಂಡು ಕುಸಿಯುತ್ತಾ ಜನರೂ ಸಾವನ್ನಪ್ಪುತ್ತಿರುವುದು ಮಣ್ಣಿನ ಆಕ್ರೋಶದಂತೆಯೂ ಕಾಣುತ್ತಿದೆ.

ಕಬೀರರ ಕಡೆಗಾಲದ ಸಮಕಾಲೀನರಾದ ಕನ್ನಡದ ನೆಲದ ಪುರಂದರದಾಸರೂ ಕೂಡ 'ಮಣ್ಣಿಂದ ಕಾಯ... ಮಣ್ಣಿಂದಲೇ ಎಲ್ಲವೂ... ಮಣ್ಣಿಂದಲೇ ಅನ್ನ, ಬಣ್ಣ, ಮಣ್ಣಿಂದಲೇ ಬೊಕ್ಕಸ, ಬಂಗಾರ, ಮಣ್ಣಿಂದಲೇ ಪರ್ವತ... ಕಡೆಗೆ ವೈಕುಂಠವೂ ಮಣ್ಣೇ' ಎಂದು ಹಾಡಿ ನಮ್ಮ ಜೀವನವನ್ನೆಲ್ಲಾ ಮಣ್ಣಿಗೇ ಸಮೀಕರಿಸಿದ್ದಾರೆ.

ದಾರ್ಶನಿಕವಾಗಿ ಮಣ್ಣು ಮತ್ತು ಮಾನವರ ಜೀವಂತಿಕೆಯ ಸಂಬಂಧದ ಬಗೆಗಿನ ತಿಳಿವಳಿಕೆಯು ಸಾಕಷ್ಟು ಪುರಾತನವಾದದು. ಸಾಲದ್ದಕ್ಕೆ ಮಣ್ಣು ಮತ್ತು ನಾಗರಿಕತೆಗಳ ಸಂಬಂಧದ ಉಗಮ ಹಾಗೂ ಅಳಿವುಗಳ ಚರಿತ್ರೆಯ ಕುರಿತೂ ಮಾನವ ಕುಲಕ್ಕೆ ಪರಿಚಯವಿದೆ. ಹಾಗೆ ನೋಡಿದರೆ ನಮ್ಮ ಸಂಸ್ಕೃತಿಯ ಹುಟ್ಟೂ ಮಣ್ಣಿನಿಂದಲೇ ಸಾಧ್ಯವಾಗಿದೆ, ಜೊತೆಗೆ ಸಂಸ್ಕೃತಿಗಳ ವಿನಾಶವೂ ಮಣ್ಣಿನ ಅವನತಿಯಿಂದಲೇ ಆಗಿರುವುದನ್ನು ವೈಜ್ಞಾನಿಕ ನಿದರ್ಶನಗಳಲ್ಲಿ ಅರಿಯಲಾಗಿದೆ. ಇಷ್ಟಾಗಿಯೂ ಮಣ್ಣಿನ ಬಗೆಗಿರುವ ಕಾಳಜಿಯು ಮಾತ್ರ ಇರಬೇಕಾದಷ್ಟು ಇಲ್ಲದಿರುವುದು ಮಾನವ ಕುಲವು ಅನುಭವಿಸುತ್ತಿರುವ ದೊಡ್ಡ ದುರಂತವಾಗಿದೆ.

ಇಡೀ ಭೂಮಿಯ ಮೇಲ್ಮೈಯನ್ನು ಕೇವಲ ಎರಡೇ ವಸ್ತುಗಳು ಆವರಿಸಿವೆ. ನೀರು ಮತ್ತು ನೆಲ! ಭೂಮಿಯ ಮೇಲಿನ ಯಾವುದೇ ಪ್ರಮುಖ ಆಗುಹೋಗುಗಳಿಗೂ ಇವೆರಡೇ ಮೂಲಭೂತ ಕಾರಣಗಳು. ಈ ನೆಲದ ಮೇಲೆ ಜೀವಿಗಳಿಗೆ ಏನೆಲ್ಲಾ ಸಾಧ್ಯವಾಗಿದ್ದರೂ ಅವೆಲ್ಲವೂ ಈ ಎರಡು ವಸ್ತುಗಳನ್ನೇ ಆಧರಿಸಿವೆ. ನೆಲದ ಮೇಲಿನ ತೆಳು ಪದರವಾದ ಮಣ್ಣನ್ನು "ಎಲ್ಲ ಜೀವಿಗಳ ಹೊಟ್ಟೆ" ಎಂದೇ ಕರೆಯಲಾಗುತ್ತದೆ. ಜೀವಿಗಳ ಬಹುಪಾಲು ಅಗತ್ಯಗಳು ಮಣ್ಣಿಂದಲೇ ದೊರಕುತ್ತವೆ. ಜೀವಿಗಳ ವಿಕಾಸದಲ್ಲಿ ಮಣ್ಣಿನ ಪಾತ್ರ ಹಾಗೂ ಮಣ್ಣಿನ ವಿಕಾಸದಲ್ಲಿ ಜೀವಿಗಳ ಪಾತ್ರ ಎರಡೂ ಪರಸ್ಪರ ಹೊಂದಾಣಿಕೆಯಿಂದಲೇ ನಡೆದಿವೆ. ಇದನ್ನು ತಿಳಿದೂ ನಿಭಾಯಿಸುವ ಗ್ರಹಿಕೆ ಮಾತ್ರ ಬೆಳೆಯುತ್ತಿಲ್ಲ. ಬದಲಾಗಿ ವಿನಾಶವನ್ನು ತರುತ್ತಿರುವುದು ಆತಂಕದ ಸಂಗತಿಯಾಗಿದೆ.

ನಮ್ಮ ಜನಸಂಖ್ಯೆಯು ಬೆಳೆದಂತೆ ಹೊಟ್ಟೆಯನ್ನು ತುಂಬುವ ಆಶಯದಲ್ಲಿ ಮಾತ್ರವೇ ಮಣ್ಣಿನ ಅರಿವನ್ನು ವಿಸ್ತರಿಸುತ್ತಾ ಸಾಗಿದ್ದೇವೆ, ಪ್ರತೀ ಹಂತಗಳಲ್ಲೂ ಎಡವುತ್ತಲೂ ಇದ್ದೇವೆ. ಈ ನಿಟ್ಟಿನಲ್ಲಿ ಕೃಷಿಕರನ್ನು 'ಮಣ್ಣಿನ ಮಕ್ಕಳು' ಎಂದು ವೈಭವೀಕರಿಸಿ, ಕೇವಲ ಅವರನ್ನು ಮಾತ್ರವೇ ಮಣ್ಣಿನ ಸಂರಕ್ಷಕರು ಎಂದು ಆರೋಪಿಸಿದ್ದೇವೆ. ಮಣ್ಣನ್ನು ಗ್ರಹಿಸುವಲ್ಲಿ ಮಾನವ ಸಂಕುಲವು ಒಟ್ಟಾರೆಯಾಗಿ ಜಾಗರೂಕವಾಗಿಲ್ಲ ಎಂಬುದು ಆತಂಕದ ವಿಚಾರ. 'ಮಣ್ಣು ಎಲ್ಲರನ್ನೂ ಪೋಷಿಸುವ ಮೂಲಕ ಎಲ್ಲರೂ ಸಂರಕ್ಷಿಸಲೂ ಜವಾಬ್ದಾರರಾಗಿದ್ದಾರೆ' ಎನ್ನುವುದನ್ನು ಮರೆತ ಅಪೂರ್ಣ ಗ್ರಹಿಕೆ ಮತ್ತು ಜಾಗರೂಕತೆಯ ಹಿನ್ನೆಲೆಯಲ್ಲಿ ಕೆಲವು ಅಂಶಗಳನ್ನಿಲ್ಲಿ ಚರ್ಚಿಸಲಾಗಿದೆ. ಇಂದಿನ ಸನ್ನಿವೇಶದಲ್ಲಿ ಅದೊಂದು ಬಹು ಮುಖ್ಯವಾದ ತುರ್ತು. ಏಕೆಂದರೆ, ಮಣ್ಣು ಎಂಬುದು ತೀರಾ ಸ್ವಾಭಾವಿಕವಾದ ನೆಲದ ಆಸೆಯಲ್ಲಿ ನೆಲದ ಮೇಲಿನ ಪದರವಾದ ಮಣ್ಣನ್ನು ಮರೆತೇ ಹೋಗುತ್ತಿರುವುದು ಸದ್ಯದ ಪರಿಸ್ಥಿತಿ.

ಗಿಡ–ಮರಗಳನ್ನು ಬೆಳೆಸಿ ಪ್ರೋತ್ಸಾಹಿಸಬಲ್ಲ ಮಣ್ಣಿನಲ್ಲಿ ಏನಿದ್ದೀತು? ಏನಿರಬೇಕು ಎಂಬ ಪ್ರಶ್ನೆ 19ನೇ ಶತಮಾನ ಪೂರ್ವಾರ್ಧದ್ದು. ಜಸ್ಟಸ್ ವಾನ್ ಲೀಬಿಗ್ ಎಂಬ ಜರ್ಮನಿಯ ವಿಜ್ಞಾನಿಯು ತನಗೆ ತಾನೇ ಹಾಕಿಕೊಂಡ ಪ್ರಶ್ನೆಗಳಿಂದ ಸಂಶೋಧನೆ ಆರಂಭಿಸಿ ತಿಳಿವಾಗಿಸಿದ ಫಲ, ಫಲವತ್ತತೆಯೆಂಬ ಫಲಿತಾಂಶಗಳಾಗಿವೆ. ಅಂದಿನಿಂದ ಇಂದಿನವರೆಗೂ ಇದರ ಬೆಳವಣಿಗೆಯು ನಿರಂತರವಾಗಿ ಸಾಗಿದೆ. ಈವರೆಗಿನ ಬಹುಪಾಲು ಮಣ್ಣಿನ ವೈಜ್ಞಾನಿಕ ಅರಿವನ್ನು ರೈತರ ಜವಾಬ್ದಾರಿಯಲ್ಲಿ ಇರಿಸಿ, ಮಣ್ಣಿನ ಪರೀಕ್ಷೆಗಳ ಉತ್ತರಗಳಲ್ಲಿ ತಿಳಿಯಬಲ್ಲ ಸಾಧನೆಗಳ ಸಂಶೋಧನೆ ಸಾಕಷ್ಟೇ ಆಗಿದೆ.